ಶ್ರೀ ಎಚ್. ಜಿ. ಗೋವಿಂದೇಗೌಡ.— ಮಾಲೀಕರು ಬಾಡಿಗೆ ದರ ಹೆಚ್ಚು ಮಾಡಲಿಕ್ಕೆ ಪ್ರಯತ್ನಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಮಾಲೀಕರು ಶಾಲಾ ಕಟ್ಟಡಗಳನ್ನು ಖಾಲಿ ಮಾಡಿಸಲಿಕ್ಕೆಂದೇ ಏನೇನೋ ಕಿರುಕುಳ ಕೊಡುವುದು, ಕೆಡವಲಿಕ್ಕೆಂದು ಕಾರಣ ಹೇಳುವುದು. ಹೀಗೆಲ್ಲಾ ನಡೆದು ಎಷ್ಟೋ ಪ್ರಕರಣಗಳು ಹಾಲಿ ಕೋರ್ಟಿನಲ್ಲಿವೆ. ಸಾಮಾನ್ಯವಾಗಿ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್ ವ್ಯಾಪ್ತಿಯೊಳಗೆ ಬರುವ ಶಾಲಾ ಕಟ್ಟಡಗಳನ್ನು ಪಿಡಬ್ಲ್ಯೂಡಿ ಇಲಾಖೆಯವರಿಂದ ಕಟ್ಟಿಸಲು ವ್ಯವಸ್ಥೆ ಮಾಡಿದ್ದೇವೆ. ಬಜೆಟ್‌ನಲ್ಲಿನ ಸರ್ಕಾರದ ಅನುದಾನ ಸಾರ್ವಜನಿಕರ ವಂತಿಗೆ ಮತ್ತು ಮುನಿಸಿಪಲ್ ಕಾರ್ಪೊರೇಷನ್‌ಗಳ ಸಹಮತದೊಂದಿಗೆ ಶಾಲಾ ಕಟ್ಟಡಗಳನ್ನು ಕಟ್ಟಿಸಲು ಸರ್ಕಾರ ವ್ಯವಸ್ಥೆ ಮಾಡುತ್ತಿದೆ.

ಶ್ರೀ ಎಸ್. ಎಸ್. ಕಡಪಟ್ಟಿ.—ಇಳಕಲ್‌ನಲ್ಲಿರುವ ಶಾಲಾ ಕಟ್ಟಡದ ಪರಿಸ್ಥಿತಿಯ ಬಗ್ಗೆ ವಿವರ ತಮ್ಮ ಗಮನಕ್ಕೆ ಬಂದಿದೆಯೇ ? ಕಟ್ಟಡ ನಿರ್ಮಾಣಕ್ಕೆ ಏನು ವ್ಯವಸ್ಥೆ ಮಾಡಿರುತ್ತೀರಿ ?

ಶ್ರೀ ಎಚ್. ಜಿ. ಗೋವಿಂದೇಗೌಡ.—ಗ್ರಾಮಾಂತರಗಳಲ್ಲಿ ಶಾಲಾ ಕಟ್ಟಡಗಳನ್ನು ಕಟ್ಟಲು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಬಿಡಿಓಗಳ ನೇತೃತ್ವದಲ್ಲಿ ಇದು ನಡೆಯುತ್ತದೆ. ಒಟ್ಟಿನಲ್ಲಿ ಇತರೆ ಕಡೆಗಳಲ್ಲಿ ಪಿಡಬ್ಲ್ಯೂಡಿ, ಮುನಿಸಿಪಾಲಿಟಿಗಳ ನೇತೃತ್ವದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ನಡೆಯುತ್ತಿದೆ.

ಸಂತೇಬಾಚಹಳ್ಳಿ ಹಾಗೂ ಅಫಲಯಂ ಗ್ರಾಮಗಳಲ್ಲಿರುವ ಪ್ರಾಥಮಿಕ ಪಾಠ ಶಾಲೆಗಳ ಆಟದ ಮೈದಾನಗಳು

೩೩೭. ಶ್ರೀಕೃಷ್ಣ.—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ರಾಜ್ಯ ಶಿಕ್ಷಣ ಮಂತ್ರಿಯವರು ದಯವಿಟ್ಟು ಉತ್ತರಿಸುವರೇ ?

(ಅ) ಸಂತೇ ಬಾಚಹಳ್ಳಿ ಹಾಗೂ ಅಫಲಯಂ ಗ್ರಾಮಗಳಲ್ಲಿರುವ ಪ್ರತಿಯೊಂದು ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ಶಾಲೆಗಳ ಆಟದ ಮೈದಾನಗಳ ವಿಸ್ತೀರ್ಣ ಎಷ್ಟು? (ವಿವರಗಳನ್ನು ಕೊಡುವುದು)

(ಆ) ಮೈದಾನಗಳ ಸಂರಕ್ಷಣೆಗೆ ಆಡ್ಡಗೋಡೆಗಳನ್ನು ನಿರ್ಮಿಸುವ ಕಾರ್ಯವನ್ನು ಇದುವರೆವಿಗೂ ಕೈಗೊಂಡಿಲ್ಲದಿರುವುದಕ್ಕೆ ಕಾರಣಗಳೇನು ?

(ಇ) ಮೈದಾನಗಳು ಹಾಗೇ ಇರುವುದರಿಂದ ಅತಿಕ್ರಮಣಕ್ಕೆ ಒಳಗಾಗಿ ಹಾಳಾಗುವುದಿಲ್ಲವೇ ?

(ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಎಚ್. . ಗೋವಿಂದೇಗೌಡ (ಮಾನ್ಯ ರಾಜ್ಯ ಶಿಕ್ಷಣ ಮಂತ್ರಿಯವರು).—

(ಅ) ಸಂತೇಬಾಚಹಳ್ಳಿ ಗ್ರಾಮದಲ್ಲಿ ಶಾಲೆ ಆಟದ ಮೈದಾನಗಳ ವಿಸ್ತೀರ್ಣ ಈ ಕೆಳಕಂಡಂತೆ ಇರುತ್ತದೆ.

(೧)	ಕಿರಿಯ ಪ್ರಾಥಮಿಕ ಶಾಲೆ	...	೧ ಎಕರೆ	೨೦ ಗುಂಟೆ
(೨)	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ	...	೨ ,,	೦೦ ,,
(೩)	ಸರ್ಕಾರಿ ಕಿರಿಯ ಕಾಲೇಜು	...	೦ ,,	೯೯ ,,
			೧ ,,	೪೮ ,,
			೧ ,,	೦೦ ,,

ಅಫಲಯಂ ಗ್ರಾಮದಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಪ್ರೌಢ ಶಾಲೆಗಳು ಒಂದೇ ಸರಹದ್ದಿನಲ್ಲಿದ್ದು, ಆದರಲ್ಲಿ ಅಕ್ರಮ ಕಟ್ಟಡಗಳು ನಿರ್ಮಾಣವಾಗಿದೆ ಎಂದು ಮತ್ತು ವಿಸ್ತೀರ್ಣ ಖಚಿತವಾಗಿ ಶಾಲೆಗಾಗಿ ಇರುವುದು ಎಷ್ಟು ಎಂಬುದರ ವಿವರ ಪಡೆಯಲಾಗುತ್ತಿದೆ.

(ಆ) ಆಡ್ಡಗೋಡೆ ಸಂಬಂಧದಲ್ಲಿ ತಂತಿ ಬೇಲಿಯನ್ನು ಹಾಕಿಸಿ ಕೊಡುವಂತೆ, ಅರಣ್ಯ ಇಲಾಖೆಯವರಿಗೂ ಕೆ. ಆರ್. ಪೇಟೆ ಬಿ.ಡಿ.ಓ. ರವರಿಗೆ ವಿನಂತಿಸಿಕೊಳ್ಳಲಾಗಿದೆ. ಅಫಲಯಂ ಶಾಲೆಯಂ

ಆಟದ ಮೈದಾನದ ವಿಸ್ತೀರ್ಣ ಎಷ್ಟೆಂದು ತಿಳಿದುಬಂದಿಲ್ಲವಾದ್ದರಿಂದ ತಹಸೀಲ್ದಾರ್‌ರವರಿಗೆ ಬರೆದು ಖಚಿತಪಡಿಸಿಕೊಳ್ಳುವಂತೆ ಸಂಬಂಧಪಟ್ಟವರಿಗೆ ತಿಳಿಸಲಾಗಿದೆ.

(ಇ) ನಿಜ. ಶಾಲಾಭಿವೃದ್ಧಿ ಸಮಿತಿ ಹಾಗೂ ಸ್ಥಳೀಯರು ಆಸಕ್ತಿ ವಹಿಸಿದರೆ ಮಾತ್ರ ಈ ಅಕ್ರಮವನ್ನು ನಿಲ್ಲಿಸಬಹುದು.

(ಈ) ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಕ್ರಮ ಸಾಧ್ಯವಾಗಲಾರದು ಇಲ್ಲೂ ಸ್ಥಳೀಯರ ಸಹಕಾರ ಇದ್ದರೆ ಮಾತ್ರ ಸೂಕ್ತ ಕ್ರಮ ಸಾಧ್ಯ (ಬಿಡುಗಡೆಗೆ ಒಪ್ಪಿಗೆ ಪಡೆದಿದೆ)

ಶ್ರೀ ಕೃಷ್ಣ.—ಅಧ್ಯಕ್ಷರೇ, ಈ ಸಂತೇಬಾಚನಹಳ್ಳಿ ಹಾಗೂ ಅಫಲಯ ಗ್ರಾಮಗಳಲ್ಲಿ ಪ್ರೌಢ ಶಾಲೆಗಳ ಜಮೀನನ್ನು ಅತಿಕ್ರಮಣ ಮಾಡಿರುವ ಬಗ್ಗೆ ಅನೇಕ ಬಾರಿ ಪೋಲೀಸ್ ಕಂಪ್ಲೇಂಟ್ ಕೊಡ ಲಾಗಿದೆ. ಅಲ್ಲಿ ತಂತಿ ಬೇಲಿ ಹಾಕುವುದಕ್ಕೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತಾರೆಯೆ? ಮತ್ತು ಸದರಿ ಪ್ರೌಢಶಾಲೆಗಳ ಜಮೀನ ವಿಸ್ತೀರ್ಣ ಎಷ್ಟು ?

ಶ್ರೀ ಎಚ್. ಜಿ. ಗೋವಿಂದೇಗೌಡ.—ತಂತಿ ಬೇಲಿ ಹಾಕಿಸತಕ್ಕಂಥ ಕಾರ್ಯಕ್ರಮದ ಬಗ್ಗೆ ಈಗ ತಮಗೆ ಗೊತ್ತಿದೆ, ಅರಣ್ಯ ಇಲಾಖೆಯವರು ಶಾಲಾ ವನ ಮಾಡತಕ್ಕಂಥ ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದಾರೆ. ಅರಣ್ಯ ಇಲಾಖೆಯವರಿಗೇ, ಅವರೇ ಈ ಶಾಲಾವನಪನ್ನು ಉಪಯೋಗಿಸಿಕೊಂಡು ತಂತಿ ಬೇಲಿ ಹಾಕಿಸುವಂತೆ ಕೇಳಿಕೊಳ್ಳುತ್ತೇನೆ. ಎನ್.ಆರ್.ಇ.ಪಿ, ಯೋಜನೆಯಲ್ಲಿ ಕಾಂಪೌಂಡನ್ನು ಕಟ್ಟಿಸಿ ಕೊಡಬೇಕೆಂದು ಸ್ಥಳೀಯ ಬಿ.ಡಿ.ಓ.ನವರಿಗೂ ಸಹಾ ಕೇಳಿಕೊಂಡಿದ್ದೇನೆ. ಈಗ ಇದರ ಬಗ್ಗೆ ಇನ್ನೂ ಸ್ಪಷ್ಟವಾದ ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಪಟ್ಟವರಲ್ಲಿಯೂ ಸಹಾ ತಿಳಿಸುತ್ತೇನೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಕೃಷ್ಣ.—ಈಗ ಬಿ.ಡಿ.ಓ. ಅಧಿಕಾರಿಗಳು ಸಹಾ ಇದರ ಬಗ್ಗೆ ಏನು ಕ್ರಮ ಕೈಗೊಂಡಿಲ್ಲ ಮತ್ತು ಈ ಅರಣ್ಯ ಇಲಾಖೆಯವರು ಸಹಾ ಅಲ್ಲಿ ವನವನು, ಕೂಡ ಬೆಳೆಸಿಲ್ಲ, ತಂತಿ ಬೇಲಿ ಹಾಕಿಲ್ಲ. ಆದಕ್ಕೋಸ್ಕರ ಈ ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್ ಜಿ. ಗೋವಿಂದೇಗೌಡ.—ಈಗ ನಾನು ಹೇಳುವುದೇನೆಂದರೆ ಕಟ್ಟಡಗಳನ್ನು ಕಟ್ಟಿಸು ವುದಕ್ಕೆ ಕಟ್ಟಡಗಳನ್ನು ಮೈಂಟೈನ್ ಮಾಡುವುದಕ್ಕೆ ಬಹಳ ಹಣ ಬೇಕಾಗುತ್ತದೆ. ಕಾಂಪೌಂಡು ಕಟ್ಟುವುದು, ತಂತಿ ಬೇಲಿ ಹಾಕಿಸತಕ್ಕಂಥ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ. ಮತ್ತು ಪ್ರಾಥಮಿಕ ಶಿಕ್ಷಣದ ಇಲಾಖೆಯಂ ಪರಿಶೀಲನೆಯಾಗಲೀ ಬಹಳ ಕಷ್ಟವಾಗುತ್ತದೆ. ಆದರೂ ಈ ಬಗ್ಗೆ ತೀವ್ರವಾದ ಯೋಚನೆ ಮಾಡಿ ಜಾಗ್ರತೆ ಈ ಕೆಲಸ ಮಾಡಿಸಲಾಗುವುದೆಂದೂ ಹೇಳುತ್ತೇನೆ.

ಬೆಂಗಳೂರಿನಲ್ಲಿ ತರಕಾರಿಯ ಬೆಲೆ

೧೭೪. ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರಗಳಲ್ಲಿ ಮುಂಖ್ಯವಾಗಿ ಬೆಂಗಳೂರಿನಲ್ಲಿ ತರಕಾರಿಗಳ ಬೆಲೆಯು ಹೆಚ್ಚಾಗಿದೆಯೇ? ಹಾಗಿದ್ದಲ್ಲಿ ಎಷ್ಟರಮಟ್ಟಿಗೆ ಬೆಲೆ ಏರಿಕೆ ಇದೆ? (ಬೆಂಗಳೂರು, ಮೈಸೂರು ಮತ್ತು ಹುಬ್ಬಳ್ಳಿ ನಗರಗಳಿಗೆ ಸಂಬಂಧಪಟ್ಟಂತೆ ಮೂರು ವರ್ಷಗಳ ವಾರ್ಷಿಕ ಬೆಲೆಗಳ ವಿವರ ನೀಡಿರಿ)

ಆ) ಮಧ್ಯವರ್ತಿಗಳು ಸಗಟು ವ್ಯಾಪಾರವನ್ನು ಹೊಂದಿರುವ ಕಾರಣ ತರಕಾರಿಗಳ ಬೆಲೆ ಏರಿಕೆಯು ಉಂಟಾಗಿರುವುದು ಸಹಜವೇ?

ಇ) ಮಧ್ಯವರ್ತಿಗಳ ಹತೋಟಿಯನ್ನು ತಪ್ಪಿಸಿದಲ್ಲಿ ಬೆಲೆ ಏರಿಕೆಯಂ ಕಡಿಮೆಯಾಗಿ ಅವು ಬೆಳೆ ಗಾರರಿಗೂ ಮತ್ತು ಗ್ರಾಹಕರಿಗೂ ಲಾಭದಾಯಕವಾಗಿ ಪರಿಣಮಿಸುವುದಿಲ್ಲವೇ?

ಈ) ಸರ್ಕಾರವು ತರಕಾರಿಯನ್ನು ಸಮಂಜಸ ಬೆಲೆಯಲ್ಲಿ ಗ್ರಾಹಕರಿಗೆ ಒದಗಿಸುವ ಬಗ್ಗೆ ಕೈ ಗೊಂಡ ಕ್ರಮಗಳೇನು?